ಕಥೆ

# ಬಿದಿರತಿ ಮೇಲೆ ಸೆಳೆವೆ...




**ಮಂಜುಳಾ ಜಿ.ಎಚ್.**

ಕಲೆ: ವಿಶ್ವನಾಥ ಎ.ಎಸ್.


'ಇದ ಕತಿ ಆತು ನಿಂದು ದಿನಾಲು' ಎಂದು ರಾಮಕ್ಕ ಕಾಳವ್ವನಿಗೆ ಬೈಯ್ಯಾಕ ಹತ್ತಿದ್ಲು. ನೋಡೊರಿಗೆ ಸಾಕಾಕ್ಕಿತ್ತು ಅಂತ ಅನ್ನಿಸಿದ್ರು, ಮಜಾ ತಗೊತಿದ್ರು. ಇದು ಒಂದಾ ದಿನದ ಕತಿ ಆಗಿರಲಿಲ್ಲ. ದಿನಾ ರಾಮಕ್ಕ ಕಾಳವ್ವಗ ಏನಾರ ನೆಪ ಮಾಡಿ ಬೈತಿದ್ಲು. ಜಗಳ ಆಗ್ತಾನೆ ಇತ್ತು. ರಾಮವ್ವಗ ಎರಡನೇ ಸೊಸೆ ಕಾಳವ್ವ, ಮೊದಲನೇ ಸೊಸೆ ಮನಿ ಬಿಟ್ಟ್ ಹೋಗಿದ್ಲು. ಹಂಗಾಗಿ ಕಾಳವ್ವನ್ನ ತಂದು ಕಲ್ಲಪ್ಪನಿಗೆ ಮತ್ತ ಗಂಟಾಕ್ಕಿದ್ರು. ಕಾಳವ್ವ ತವರ ಮನ್ಯಾಗ ಮೂರನೇ ಮಗಳಾಗಿ ಹುಟ್ಟಿದ್ಲು. ಹೆಂಗಾರ ಮಾಡಿ ಮದುವಿ ಮಾಡ್ಬೇಕಿತ್ತು. ಕಲ್ಲಪ್ಪಗ ಎರಡನೇ ಹೆಂಡತಿಯಾಗಿ ಮದುವಿ ಮಾಡಿ ರಾಮವ್ವನ ಮನಿ ತುಂಬಿಸಿದ್ರು. ಗಂಡ ಕಲ್ಲಪ್ಪ ಅನ್ನಿಸಿಕೊಂಡೊನು, ಕುಡುಕ ಗಿರಾಕಿ. ಕುಡಿಯೋದು ಒಂದಿತ್ತಂದ್ರ ಮುಗಿತು. ಮನಿ ಬ್ಯಾಡ, ಮಠ ಬ್ಯಾಡ. ಮೊದಲನೇ ಹೆಂಡತಿ ಕುಡಿಯೋದ್ಕಾ ಬಿಟ್ ಹೋಗ್ಯಾಳಂತ ಅನ್ನೊ ಸುದ್ದಿ ಹರಿದಾಡ್ತಿತ್ತು. ಆ ಸುದ್ದಿ ಏನಾರ ಇರ್ಲಿ. ಇದ್ದ ಜೀವಕೂ ಸುಖ ಇಲ್ಲರದಂಗ ಆಗೇತಿ. ಆ ಹೆಣ್ ಮಗಳು ಬೆಳಗ್ಗೆಯಿಂದ ಸಂಜೆ ಸೂರ್ಯ ಮುಳುಗೋವರೆಗೂ ಕೆಲಸ ಮಾಡಿ ಮನಿಗೆ ಬಂದು ಚಾ-ಪಾಣಿ, ದನಕ ಗುಗ್ಗರಿ ಕುದಿಸಿ, ಆಕಳಿಗಿ ತಿನ್ನಿಸಿ ಎಲ್ಲರ ಊಟ ಆಗೋತನ್ಕ ಕೂತು ಅಕಿ ಊಟ ಮಾಡೊಷ್ಟೊತ್ತಿಗೆ ಅರ್ಧ ಬೆಳಕ ಹರಿತಿತ್ತು.

ಹೆಣ್ ಮಗಳು ಅಂದ್ರ ಹಿಂಗೆ, ಅವಳ ಜೀವನ ಅಂದ್ರೆ ಹಿಂಗೆ ಅನ್ನೊ ಒಂದು ಚಿತ್ರಣ ನಮ್ ಮಂದಿ ಕಟ್ಟಿ ಹೋಗಿರ್ತಾರೆ ನೋಡಿ, ಹಂಗೆ ಇವಳು ಇದ್ಲು. ಗೊತ್ತಿರೊ ಹಕೀಕತ್ ಇದೇ. ರಾಮವ್ವ ಒಳ್ಳೆಯವಳೇ. ಹಂಗಂತ ಕಾಳವ್ವ ಕೆಟ್ಟಾಕಿ ಅಲ್ಲ, ರಾಮವ್ವಗ, ಕಾಳವ್ವಗ ಜಗಳ ಒಂದೇ ವಿಷಯಕ್ಕ ಬರ್ತಿತ್ತು. ಗಂಡನ್ನ ಹತೋಟಿಯಾಗ ಇಟ್ಕೊಂಡ್ರಾ, ಅವ ಯ್ಯಾಕ್ ಬಿಡಾಡಿ ದನದ ತರ ಆಕ್ಕಾನು? ಮನಿ ಮಠ ಬಿಟ್ಟು ಸಿಕ್ಕಾಕಿ ಹಿಂದ ತಿರಗ್ತಾನು? ಅಂತ ಅತ್ತಿ ವಾದ. ಕಾಳವ್ವ ಅವನನ್ನ ಚಂತನಾ